# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. : 44 ಫ್ರಾ.ಸಾ. : 34**

| | | |
|---|---|---|
| ಸಾಕ್ಷಿಯ ಹೆಸರು | : | ರಾಜೇಶ ಸುಬ್ರಾಯ ದೇವಾಡಿಗ |
| ತಂದೆಯ ಹೆಸರು | : | ಸುಬ್ರಾಯ ದೇವಾಡಿಗ |
| ವಯಸ್ಸು | : | 36 ವರ್ಷ |
| ಕೆಲಸ | : | ಸಿ.ಪಿ.ಸಿ. 1675, ಪೊಲೀಸ್ ಉಪಾಧೀಕ್ಷಕರ ಕಛೇರಿ, ಕಾರವಾರ |
| ವಾಸ | : | ಕಾರವಾರ |

**ದಿನಾಂಕಃ 20-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

1. ಆಗಸ್ಟ್ 2013 ರಿಂದ ಆಗಸ್ಟ್ 2022 ರವರೆಗೆ ನಾನು ಕಾರವಾರದ ನಗರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.22-10-2018 ರಂದು ತನಿಖಾಧಿಕಾರಿಗಳು ನನಗೆ, ಚಾಸಾ-47/ಸಿ.ಪಿ.ಸಿ-1618 ಮತ್ತು ಚಾಸಾ-69/ಪಿ.ಎಸ್.ಐ. ರವರಿಗೆ ಈ ಪ್ರಕರಣದ 2 ನೇ ಆರೋಪಿಯನ್ನು ಪತ್ತೆ ಹಚ್ಚಿ ತಂದು ಹಾಜರುಪಡಿಸುವಂತೆ ಮೌಖಿಕವಾಗಿ ಸೂಚಿಸಿದ್ದು, ಅದರಂತೆ ಸದರಿ ಆರೋಪಿಯ ಸಿ.ಡಿ.ಆರ್. ನ್ನು ಪರಿಶೀಲಿಸಿ ನಂತರ ನಾವು 3 ಜನರೂ ದಾಂಡೇಲಿಯ ಮಾರುತಿ ನಗರಕ್ಕೆ ಹೋಗಿ, ಆತನ ಮನೆಯ ಬಳಿ ಮಫ್ತಿಯಲ್ಲಿ ಆರೋಪಿಗಾಗಿ ಕಾಯುತ್ತಿದ್ದಾಗ, ದಿ.23-10-2018 ರಂದು ಬೆಳಿಗ್ಗೆ 2.30 ಗಂಟೆಗೆ ಒಬ್ಬ ವ್ಯಕ್ತಿಯು 2 ನೇ ಆರೋಪಿಯ ಮನೆಯ ಬಳಿ ಬಂದಿದ್ದನ್ನು ನೋಡಿ, ನಾವು ಆತನ ಬಳಿಗೆ ಹೋಗಿ ವಿಚಾರ ಮಾಡಲಾಗಿ, ಆತ ತನ್ನ ಹೆಸರು ಮುಸ್ತಾಖ್ ತಂದೆ ಹುಸೇನ್ ಶೇಖ್ ಎಂದು ತಿಳಿಸಿದ್ದು, ನಾವು ಆತನಿಗೆ ನಮ್ಮ ಪರಿಚಯ ಹೇಳಿ, ಈ ಪ್ರಕರಣದ ಬಗ್ಗೆ ತಿಳಿಸಿ, ಆತನಿಗೆ ನಮ್ಮೊಂದಿಗೆ ಠಾಣೆಗೆ ಬರುವಂತೆ ತಿಳಿಸಿದ್ದು, ಆತ ನಮ್ಮೊಂದಿಗೆ ಬರಲು ಒಪ್ಪಿರುತ್ತಾನೆ. ಅದರಂತೆ ನಾವು ಆತನನ್ನು ಕರೆದುಕೊಂಡು ಬಂದು ಬೆಳಿಗ್ಗೆ 5.30 ಗಂಟೆಗೆ ಠಾಣೆಯಲ್ಲಿ ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿರುತ್ತೇವೆ. ತನಿಖಾಧಿಕಾರಿಗಳು 2 ನೇ ಆರೋಪಿಯನ್ನು ವಿಚಾರಣೆ ಮಾಡಿ, ಆತನ

ಸ್ವ-ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಆನಂತರ ಬೆಳಿಗ್ಗೆ 8.00 ಗಂಟೆಗೆ ಚಾಸಾ-45/ಸಿ.ಪಿ.ಸಿ-952 ಹಾಗೂ ಮತ್ತೊಬ್ಬ ಸಿಬ್ಬಂದಿಯಾದ ಸಿ.ಪಿ.ಸಿ-662 ರವರು 3 ನೇ ಆರೋಪಿಯನ್ನು ತಂದು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿದ್ದು, ತನಿಖಾಧಿಕಾರಿಗಳು 3 ನೇ ಆರೋಪಿಯನ್ನೂ ಸಹ ವಿಚಾರಣೆ ಮಾಡಿ, ಆತನ ಸ್ವ-ಇಚ್ಛಾ ಹೇಳಿಕೆಯನ್ನೂ ಸಹ ಪಡೆದುಕೊಂಡಿರುತ್ತಾರೆ. ಆರೋಪಿತರ ಸ್ವ-ಇಚ್ಛಾ ಹೇಳಿಕೆಯನ್ನು ಪಡೆದುಕೊಳ್ಳುವ ಕಾಲಕ್ಕೆ ಪಂಚರು ಹಾಗೂ ಮೃತನ ಸಂಬಂಧಿಕರು ಠಾಣೆಯಲ್ಲಿ ಹಾಜರಿದ್ದರು. 2 ಮತ್ತು 3 ನೇ ಆರೋಪಿತರ ತಮ್ಮ ಸ್ವ-ಇಚ್ಛಾ ಹೇಳಿಕೆಯಲ್ಲಿ ತಾವು ಪ್ರೇಮ್ ಕುಮಾರನನ್ನು ಕೊಲೆ ಮಾಡಿದ ಸ್ಥಳ ಹಾಗೂ ಶವವನ್ನು ತೋರಿಸುತ್ತೇವೆ ಎಂದು ಹೇಳಿದ್ದು, ಅದರಂತೆ ಬೆಳಿಗ್ಗೆ 9.45 ಗಂಟೆಗೆ ತನಿಖಾಧಿಕಾರಿಗಳು, ಇಬ್ಬರು ಪಂಚರು, ಮೃತನ ಸಂಬಂಧಿಕರು ಹಾಗೂ ಪೊಲೀಸ್ ಸಿಬ್ಬಂದಿಗಳು ಇಲಾಖೆಯ ವಾಹನಗಳಲ್ಲಿ 2 ಮತ್ತು 3 ನೇ ಆರೋಪಿತರೊಂದಿಗೆ ಅವರು ತೋರಿಸಿದ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ಆ ಸಮಯದಲ್ಲಿ ವೈದ್ಯರು ಹಾಗೂ ಅವರ ಸಹಾಯಕರು ಆ್ಯಂಬುಲೆನ್ಸ್‌ನಲ್ಲಿ ಸ್ಥಳಕ್ಕೆ ಬಂದಿರುತ್ತಾರೆ. ಆರೋಪಿತರು ತೋರಿಸಿದಂತೆ ನಾವು ಠಾಣೆಯಿಂದ ವಾಹನಗಳಲ್ಲಿ ಹೊರಟು ಸದಾಶಿವಗಡ, ಕದ್ರಾ, ಅಣಶಿ ಮಾರ್ಗವಾಗಿ ಉಳವಿ ಚೆಕ್ ಪೋಸ್ಟ್ ಬಳಿ ಹೋಗಿದ್ದು, ಅಲ್ಲಿ ಆರೋಪಿತರು ವಾಹನವನ್ನು ನಿಲ್ಲಿಸಲು ಹೇಳಿ, ವಾಹನದಿಂದ ಇಳಿದು, ಆಕಳಗವಿ ಅರಣ್ಯಪ್ರದೇಶದ ಕಡೆಗೆ ನಮ್ಮನ್ನು ಕಾಲುನಡಿಗೆಯಲ್ಲಿ ಕರೆದುಕೊಂಡು ಹೋಗಿ ಸುಮಾರು ಎರಡೂವರೆ ಕಿ.ಮೀ. ಕ್ರಮಿಸಿದ ನಂತರ, ಕಾಡಿನೊಳಗೆ ಸುಮಾರು ಒಂದೂವರೆ ಕಿ.ಮೀ. ಕಡಿದಾದ ರಸ್ತೆಯಲ್ಲಿ, ಗುಡ್ಡದ ಇಳಿಜಾರಿನಲ್ಲಿ ಒಂದು ದೊಡ್ಡದಾದ ಒಣಗಿದ ಮರ ಬಿದ್ದಿದ್ದು, ಆ ಮರದ ಬುಡದ ಹತ್ತಿರ ಬಿದ್ದಿದ್ದ ಪ್ರೇಮ್ ಕುಮಾರನ ಶವವನ್ನು ತೋರಿಸಿರುತ್ತಾರೆ. ಸದರಿ ಮೃತ ದೇಹವನ್ನು ನಮ್ಮೊಂದಿಗಿದ್ದ ಸಂಬಂಧಿಕರು ನೋಡಿ ಗುರುತಿಸಿ, ಪ್ರೇಮ್ ಕುಮಾರನ ಶವ ಎಂದು ಹೇಳಿರುತ್ತಾರೆ. ನಾವು ಶವವನ್ನು ನೋಡಿದಾಗ ಅದು ಅರ್ದಂಬರ್ಧ ಕೊಳೆದ ಸ್ಥಿತಿಯಲ್ಲಿತ್ತು ಹಾಗೂ ಶವದ ಮೈಮೇಲೆ ನಿಕ್ಕರ್ ಇತ್ತು, ಶವದ ಮೈಮೇಲೆ ಕತ್ತಿಯಿಂದ ಕಡಿದ ಗಾಯಗಳಾಗಿದ್ದವು. ಶವದ ಪಕ್ಕದಲ್ಲಿ ಬನಿಯಾನ್ ತುಂಡು ಹಾಗೂ ಟೀ-ಶರ್ಟ್ ಬಿದ್ದಿದ್ದು ಅವುಗಳನ್ನು ಆರೋಪಿತರು ಹಾಗೂ ಮೃತನ ಸಂಬಂಧಿಕರು ಗುರುತಿಸಿ, ಅವು ಪ್ರೇಮ್ ಕುಮಾರನ ಬಟ್ಟೆಗಳು ಎಂದು ಹೇಳಿರುತ್ತಾರೆ. ತನಿಖಾಧಿಕಾರಿಗಳು ಸದರಿ ಸ್ಥಳವನ್ನು ಪರಿಶೀಲಿಸಿ ಪಂಚರ ಸಮಕ್ಷಮ ಪಂಚನಾಮೆ ಮಾಡಿ, ಸದರಿ ಬಟ್ಟೆಗಳನ್ನು ಜಪ್ತುಪಡಿಸಿಕೊಂಡರು. ಆ ಸಮಯದಲ್ಲಿ ಪಂಚರು ಹೇಳಿದ ಮೇರೆಗೆ ತನಿಖಾಧಿಕಾರಿಯ

ಉಕ್ತಲೇಖನದಂತೆ ಸದರಿ ಪಂಚನಾಮೆಯನ್ನು ನನ್ನ ಹಸ್ತಾಕ್ಷರದಲ್ಲಿ ಬರೆದಿರುತ್ತೇನೆ. ಪಂಚನಾಮೆಯ ಕಾಲಕ್ಕೆ ತನಿಖಾಧಿಕಾರಿಯು ನಕಾಶೆ ತಯಾರಿಸಿ, ಫೋಟೊ ತೆಗೆದಿರುತ್ತಾರೆ. ಸಾಕ್ಷಿಯು ತಾನು ಬರೆದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–11 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–11(ಬಿ) ಎಂದು ಗುರುತಿಸಲಾಯಿತು.

2. ಮೃತನ ಮೈಮೇಲಿದ್ದ ನಿಕ್ಕರನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಓ–10 ಎಂದು ಗುರುತಿಸಲಾಗಿರುತ್ತದೆ. ಅದೇ ರೀತಿ ಸ್ಥಳದಲ್ಲಿ ಜಪ್ತುಪಡಿಸಿಕೊಂಡ ಬನಿಯಾನ್ ಮತ್ತು ಟೀ–ಶರ್ಟ್ ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಎಂ.ಓ–8 ಮತ್ತು 9 ಎಂದು ಗುರುತಿಸಲಾಗಿರುತ್ತದೆ. ಪಂಚನಾಮೆಯ ಸಮಯದಲ್ಲಿ ತೆಗೆದ ಫೋಟೊಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ–13 ಮತ್ತು 14 ಎಂದು ಗುರುತಿಸಲಾಗಿರುತ್ತದೆ. ನಿಪಿ–14 ಫೋಟೊದಲ್ಲಿ ಶವವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಆನಂತರ ತನಿಖಾಧಿಕಾರಿಗಳು ಪಂಚರ ಸಮಕ್ಷಮ ಶವದ ಪಂಚನಾಮೆಯನ್ನು ಮಾಡಿರುತ್ತಾರೆ. ಆನಂತರ 2 ಮತ್ತು 3 ನೇ ಆರೋಪಿತರು ತಾವು ಪ್ರೇಮ್ ಕುಮಾರನ ಕಣ್ಣಿಗೆ ಬಟ್ಟೆ ಕಟ್ಟಿದ ಸ್ಥಳವನ್ನು ಹಾಗೂ ಕತ್ತಿಯಿಂದ ಹಲ್ಲೆ ಮಾಡಿದ ಸ್ಥಳವನ್ನು ತೋರಿಸಿದ್ದು ತನಿಖಾಧಿಕಾರಿಗಳು ಪಂಚರ ಸಮಕ್ಷಮ ಪಂಚನಾಮೆ ಮಾಡಿ ಫೋಟೊ ತೆಗೆದಿರುತ್ತಾರೆ. ಆನಂತರ 3 ನೇ ಆರೋಪಿಯು ತಾನು ನಿಲ್ಲಿಸಿಟ್ಟ ಸ್ಥಳವನ್ನು ತೋರಿಸಿದ್ದು, ಅಲ್ಲಿಯೂ ಸಹ ತನಿಖಾಧಿಕಾರಿಗಳು ಪಂಚರ ಸಮಕ್ಷಮ ಪಂಚನಾಮೆ ಮಾಡಿ ಫೋಟೊ ತೆಗೆದಿರುತ್ತಾರೆ. ಆನಂತರ ನಮ್ಮೊಂದಿಗೆ ಬಂದ ವೈದ್ಯರು ಸ್ಥಳದಲ್ಲಿಯೇ ಶವ ಪರೀಕ್ಷೆಯನ್ನು ಮಾಡಿರುತ್ತಾರೆ.

3. ನಂತರ 2 ಮತ್ತು 3 ನೇ ಆರೋಪಿತರು ತಾವು ಕಾರನ್ನು ನಿಲ್ಲಿಸಿಟ್ಟ ಸ್ಥಳವನ್ನು ತೋರಿಸಿದ್ದು, ಅಲ್ಲಿಯೂ ಸಹ ತನಿಖಾಧಿಕಾರಿಗಳು ಪಂಚರ ಸಮಕ್ಷಮ ಪಂಚನಾಮೆ ಮಾಡಿ, ಫೋಟೊ ತೆಗೆದಿರುತ್ತಾರೆ. ಮೇಲೆ ಹೇಳಿದ ಎಲ್ಲಾ ಪಂಚನಾಮೆಗಳ ಸಮಯದಲ್ಲಿ ತೆಗೆದ ಫೋಟೊಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ–16, 17, 19, 20, 22, 23, 25, 26 ಎಂದು ಗುರುತಿಸಲಾಗಿರುತ್ತದೆ. ಆ ನಂತರ ನಾವು ಠಾಣೆಗೆ ಬಂದಿರುತ್ತೇವೆ. ಅಲ್ಲಿ ಎರಡು ಜನ ಪಂಚರನ್ನು ಬರಮಾಡಿಕೊಂಡು 2 ನೇ ಆರೋಪಿಯು ತನ್ನ

ಸ್ವ-ಇಚ್ಛಾ ಹೇಳಿಕೆಯಲ್ಲಿ ಪ್ರೇಮ್ ಕುಮಾರನನ್ನು ಕಾರವಾರದಿಂದ ಕರೆದುಕೊಂಡು ಹೋದ ಸ್ಥಳ ಹಾಗೂ ಪ್ರೇಮ್ ಕುಮಾರನು ಬೈಕನ್ನು ನಿಲ್ಲಿಸಿಟ್ಟ ಸ್ಥಳವನ್ನು ತೋರಿಸುವುದಾಗಿ ಹೇಳಿದಂತೆ, ನಾವು ಕಾರವಾರದ ಜಿಲ್ಲಾಸ್ಪತ್ರೆಗೆ ಹೋಗಿ, ಅಲ್ಲಿ 2 ನೇ ಆರೋಪಿಯು ತಾನು ಪ್ರೇಮ್ ಕುಮಾರನನ್ನು ಕಾರಿನಲ್ಲಿ ಹತ್ತಿಸಿಕೊಂಡು ಹೋದ ಸ್ಥಳ ಹಾಗೂ ಪ್ರೇಮ್ ಕುಮಾರನು ತನ್ನ ಬೈಕನ್ನು ನಿಲ್ಲಿಸಿಟ್ಟ ಸ್ಥಳವನ್ನು ತೋರಿಸಿದ್ದು, ಅಲ್ಲಿ ಪಂಚರ ಹೇಳಿಕೆಯ ಮೇರೆಗೆ ತನಿಖಾಧಿಕಾಗಳು ಹೇಳಿದಂತೆ ನಾವು ಠಾಣೆಯಿಂದ ತೆಗೆದುಕೊಂಡು ಹೋಗಿದ್ದ ಲ್ಯಾಪ್-ಟಾಪ್ ನಲ್ಲಿ ಪಂಚನಾಮೆಯನ್ನು ಗಣಕೀಕರಿಸಿ, ನಮ್ಮೊಂದಿಗೆ ತೆಗೆದುಕೊಂಡು ಹೋಗಿದ್ದ ಪ್ರಿಂಟರ್ ಮೂಲಕ ಪ್ರಿಂಟ್ ತೆಗೆದು, ಸಹಿ ಮಾಡಿ ತನಿಖಾಧಿಕಾರಿಗೆ ನೀಡಿರುತ್ತೇನೆ. ಆ ಸಮಯದಲ್ಲಿ ತನಿಖಾಧಿಕಾರಿಯು ಪ್ರೇಮ್ ಕುಮಾರನ ಬೈಕನ್ನು ಜಪ್ತುಪಡಿಸಿಕೊಂಡಿರುತ್ತಾರೆ ಹಾಗೂ ಫೋಟೊ ತೆಗೆದುಕೊಂಡಿರುತ್ತಾರೆ. ಸಾಕ್ಷಿಯು ತಾನು ಗಣಕೀಕರಿಸಿದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಸಮಯದಲ್ಲಿ ತೆಗೆದ ಫೋಟೊವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-2 ಮತ್ತು 3 ಎಂದು ಗುರುತಿಸಲಾಗಿದ್ದು, ನಿಪಿ-3 ಫೋಟೊದಲ್ಲಿರುವ ಮೋಟಾರು ಸೈಕಲನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

4. ದಿ.26-10-2018 ರಂದು 2 ಮತ್ತು 3 ನೇ ಆರೋಪಿತರು ಕೃತ್ಯದ ನಂತರ ತಾವು ಮೃತನ ಕೆಲವು ಬಟ್ಟೆಗಳನ್ನು, ಪರ್ಸ್, ಕೃತ್ಯಕ್ಕೆ ಬಳಸಿದ ಕತ್ತಿಗಳು, ಕಣ್ಣಿಗೆ ಕಟ್ಟಿದ್ದ ಬಟ್ಟೆಗಳು, 2 ನೇ ಆರೋಪಿಯ ಬಟ್ಟೆಗಳನ್ನು ಗಣೇಶ ಗುಡಿಯ ಬಳಿ ಇರುವ ಕಾಳೀ ನದಿಯ ಸೇತುವೆಯ ಬಳಿ ನೀರಿನಲ್ಲಿ ಎಸಗಿರುವುದಾಗಿ ಹೇಳಿದ್ದು, ತನಿಖಾಧಿಕಾರಿಗಳು ಇಬ್ಬರು ಪಂಚರನ್ನು ಠಾಣೆಗೆ ಬರಮಾಡಿಕೊಂಡು, 2 ಮತ್ತು 3 ನೇ ಆರೋಪಿತರು ತೋರಿಸಿದ ಸ್ಥಳಕ್ಕೆ ಲ್ಯಾಪ್-ಟಾಪ್, ಪ್ರಿಂಟರ್ ಮತ್ತು ಅದಕ್ಕೆ ಸಂಬಂಧಿಸಿದ ವಸ್ತುಗಳೊಂದಿಗೆ ವಾಹನಗಳಲ್ಲಿ ಹೋಗಿರುತ್ತೇವೆ. ಅಲ್ಲಿ 2 ನೇ ಆರೋಪಿಯು ತಾನು ಯಾವ ಸ್ಥಳದಲ್ಲಿ ಮೇಲೆ ಹೇಳಿದ ವಸ್ತುಗಳನ್ನು ಬಿಸಾಡಿರುತ್ತೇನೆ ಎಂದು ತೋರಿಸಿದ್ದು, ಅಲ್ಲಿ ನೀರು ರಭಸವಾಗಿ ಹರಿಯುತ್ತಿದ್ದ ಕಾರಣ, ಮುಳುಗುತಜ್ಞರನ್ನು ಬರಮಾಡಿಕೊಂಡು ಆ ಸ್ಥಳದಲ್ಲಿ ಮುಳುಗುತಜ್ಞರ ಸಹಾಯದಿಂದ ಹುಡುಕಾಡಿದಾಗ ಸೇತುವೆಯ 4 ನೇ ಪಿಲ್ಲರಿನ ಹತ್ತಿರ ನೀರಿನಲ್ಲಿ ಒಂದು ಕತ್ತಿ ಪತ್ತೆಯಾಗಿರುತ್ತದೆ, ಆದರೆ ಇತರೇ

ಯಾವುದೇ ವಸ್ತುಗಳು ಪತ್ತೆಯಾಗಿರುವುದಿಲ್ಲ. ನೀರಿನಲ್ಲಿ ಪತ್ತೆಯಾದ ಕತ್ತಿಯನ್ನು 2 ನೇ ಆರೋಪಿಯು ನೋಡಿ ಗುರುತಿಸಿ, ಇದೇ ಕತ್ತಿಯನ್ನು ಕೃತ್ಯಕ್ಕೆ ಬಳಸಿರುವುದಾಗಿ ಹೇಳಿದ್ದು, ಸದರಿ ಕತ್ತಿಯನ್ನು ತನಿಖಾಧಿಕಾರಿಗಳು ಪಂಚರ ಸಮಕ್ಷಮ ಜಪ್ತು ಪಂಚನಾಮೆಯಡಿ ಜಪ್ತು ಪಡಿಸಿಕೊಂಡಿರುತ್ತಾರೆ. ನಂತರ ಅಲ್ಲಿ 3 ನೇ ಆರೋಪಿಯು ತಾನು ಘಟನಾ ಕಾಲಕ್ಕೆ ಧರಿಸಿದ್ದ ಬಟ್ಟೆಗಳನ್ನು, ತನ್ನ ಮೊಬೈಲ್ ಫೋನ್ ಮತ್ತು ಮೃತನ ಬಂಗಾರದ ಸರ ಇವುಗಳನ್ನು ತನ್ನ ಮನೆಯಲ್ಲಿಟ್ಟಿರುವುದಾಗಿ ಹೇಳಿ, ನಮ್ಮನ್ನು ದಾಂಡೇಲಿಯ ಗಾಂಧೀ ನಗರದಲ್ಲಿರುವ ತನ್ನ ಬಾಡಿಗೆ ಮನೆಗೆ ಕರೆದುಕೊಂಡು ಹೋಗಿ, ಮನೆಯಲ್ಲಿಟ್ಟಿದ್ದ ಕೃತ್ಯದ ಕಾಲದಲ್ಲಿ ಧರಿಸಿದ್ದ ತನ್ನ ಬಟ್ಟೆಗಳು, ಸೋನಿ ಮೊಬೈಲ್ ಫೋನ್ ಮತ್ತು ಮೃತ ಪ್ರೇಮ್ ಕುಮಾರನ ಬಂಗಾರದ ಸರ ಇವುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ತನಿಖಾಧಿಕಾರಿಗಳು ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡಿರುತ್ತಾರೆ. ನಂತರ 2 ನೇ ಆರೋಪಿಯು ತನ್ನ ಮೊಬೈಲು ಫೋನುಗಳನ್ನು ತೋರಿಸುವುದಾಗಿ ತಿಳಿಸಿ ನಮ್ಮನ್ನು ದಾಂಡೇಲಿಯ ಮಾರುತಿ ನಗರಕ್ಕೆ ಕರೆದುಕೊಂಡು ಹೋಗಿ, ಮನೆಯಲ್ಲಿಟ್ಟಿದ್ದ ಎಂ.ಐ. ಕಂಪನಿಯ ಒಂದು ಮೊಬೈಲ್ ಮತ್ತು ನೋಕಿಯಾ ಕಂಪನಿಯ ಒಂದು ಮೊಬೈಲನ್ನು ಹಾಜರುಪಡಿಸಿದ್ದು, ತನಿಖಾಧಿಕಾರಿಗಳು ಅವುಗಳನ್ನೂ ಸಹ ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡಿರುತ್ತಾರೆ. ಈ ವರೆಗೆ ಆದ ಪಂಚನಾಮೆಯನ್ನು ನಾನು ನಮ್ಮೊಂದಿಗೆ ತೆಗೆದುಕೊಂಡು ಹೋಗಿದ್ದ ಲ್ಯಾಪ್-ಟಾಪ್ ಮೂಲಕ ಗಣಕೀಕರಿಸಿ, ಪ್ರಿಂಟರ್ ಮೂಲಕ ಪ್ರಿಂಟ್ ಮಾಡಿ, ತನಿಖಾಧಿಕಾರಿಗೆ ನೀಡಿರುತ್ತೇನೆ ಹಾಗೂ ನಾನೂ ಸಹ ಸಹಿ ಮಾಡಿರುತ್ತೇನೆ. ಸದರಿ ಪಂಚನಾಮೆಯ ವೇಳೆ ಫೋಟೋಗಳನ್ನು ತೆಗೆಯಲಾಗಿರುತ್ತದೆ. ಸಾಕ್ಷಿಯು ತಾನು ಗಣಕೀಕರಿಸಿದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-7(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಫೋಟೋಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-4, 5, 6 ಮತ್ತು 8 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಜಪ್ತುಪಡಿಸಿಕೊಂಡ ಕತ್ತಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಓ-1 ಎಂದು ಗುರುತಿಸಲಾಗಿರುತ್ತದೆ. 3 ನೇ ಆರೋಪಿಯ ಬಟ್ಟೆಗಳಾದ ಶರ್ಟ್ ಮತ್ತು ಪ್ಯಾಂಟನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಎಂ.ಓ.-2 ಮತ್ತು 3 ಎಂದು ಗುರುತಿಸಲಾಗಿರುತ್ತದೆ. ಮೃತ ಪ್ರೇಮ್ ಕುಮಾರನ ಚೈನನ್ನು ಸಾಕ್ಷಿಯು ನೋಡಿ ಗುರುತಿಸಿದ್ದು,

ಅದನ್ನು ಈಗಾಗಲೇ ಎಂ.ಓ.–4 ಎಂದು ಗುರುತಿಸಲಾಗಿರುತ್ತದೆ. 3 ನೇ ಆರೋಪಿಗೆ ಸೇರಿದ ಸೋನಿ ಕಂಪನಿಯ ಮೊಬೈಲ್ ಫೋನನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಓ.–5 ಎಂದು ಗುರುತಿಸಲಾಗಿರುತ್ತದೆ. 2 ನೇ ಆರೋಪಿಗೆ ಸೇರಿದ ಒಂದು ನೋಕಿಯಾ ಮೊಬೈಲ್ ಹಾಗೂ ಇನ್ನೊಂದು ಎಂ.ಐ. ಕಂಪನಿಯ ಫೋನುಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಎಂ.ಓ.–6 ಮತ್ತು 7 ಎಂದು ಗುರುತಿಸಲಾಗಿರುತ್ತದೆ.

**ನ್ಯಾಯಾಲಯದ ಅವಧಿ ಮುಗಿದಿದ್ದರಿಂದ, ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
Sd/–
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ